ಆ) ಈ ದುಬಾರಿ ಬಡ್ಡಿಯಿಂದಾಗಲೆ ರೈತರು ವಿದ್ಯುಚ್ಛಕ್ತಿ ಮಂಡಳಿಗೆ ಸುಸ್ತಿದಾರರಾಗಿದ್ದು ವಿದ್ಯುಚ್ಛಕ್ತಿ ಮಂಡಳಿಯವರು ಸಾವಿರಾರು ಮಂದಿ ರೈತರನ್ನು ನ್ಯಾಯಾಲಯಕ್ಕೆ ಎಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) 1990 ಆಕ್ಟೋಬರ್ ತಿಂಗಳಿಗೆ ಹಿಂದೆ ನೀರಾವರಿ ಪಂಪುಸೆಟ್ಟುಗಳ ಬಾಬ್ತು ಬಾಕಿ ಇರುವ ಮೊತ್ತದಲ್ಲಿ ಪೂರ್ಣ ಬಡ್ಡಿಯನ್ನು ಮನ್ನಾ ಮಾಡಿ ಬಾಕಿಯಿರುವ ದರವನ್ನು ಮಾತ್ರ ಸಂದಾಯ ಮಾಡಲು ಸರ್ಕಾರ ಅವಕಾಶ ಮಾಡಿ ಕೊಡುವುದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ನಿಗದಿತ ಸಮಯದಲ್ಲಿ ಬಳಕೆಯ ಬಾಬ್ತು ಹಣವನ್ನು ಪಾವತಿ ಮಾಡದಿದ್ದಲ್ಲಿ ಮಾಹೆಯಾನ ಶೇ. 2ರಷ್ಟು ಸರಳ ಬಡ್ಡಿಯನ್ನು ವಿಧಿಸಲಾಗುವುದು.

ಆ) ಬಾಕಿ ವಸೂಲಿಗಾಗಿ ಮಂಡಳಿಯು ಮೊದಲು 'ಎ' ಮತ್ತು 'ಬಿ' ಫಾರಂಗಳನ್ನು ಬಾಕಿದಾರ ಬಳಕೆದಾರರಿಗೆ ನೀಡುತ್ತದೆ. ಬಳಕೆದಾರರು ಬಾಕಿಯನ್ನು ತೀರಿಸದಿದ್ದಲ್ಲಿ ಅದಕ್ಕೆ 'ಸಿ' ಫಾರಂ ನೀಡಿ ಭೂಕಂದಾಯದ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ಬಾಕಿ ವಸೂಲಿಗಾಗಿ ವಿದ್ಯುತ್ ಮಂಡಳಿ ಗ್ರಾಹಕರನ್ನು ನ್ಯಾಯಾಲಯಕ್ಕೆ ಎಳೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಸ್ತುತ ಮಂಡಳಿಯು ನಿಯಮಾವಳಿಗಳಲ್ಲಿ ಬಡ್ಡಿಯನ್ನು ಮನ್ನಾ ಮಾಡುವ ಅವಕಾಶ ಇರುವುದಿಲ್ಲ.

ಚಿತ್ರದುರ್ಗದಲ್ಲಿ ಮೀನು ಮಾರುಕಟ್ಟೆ ಬಗ್ಗೆ.

1383 - ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿತ್ರದುರ್ಗದಲ್ಲಿ ಮೀನು ಮಾರುಕಟ್ಟೆಯನ್ನು ನಿರ್ಮಿಸುವ ಸಲಹೆ ಇದೆಯೇ?

ಆ) ಹಾಗಿದ್ದಲ್ಲಿ, ಅದು ಯಾವ ಹಂತದಲ್ಲಿದೆ? ಹಾಗೂ

ಇ) ಈ ಬಗ್ಗೆ ಎಷ್ಟು ಹಣ ಖರ್ಚಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಹಾಸನದ ಕಿಂಕೋ ಫ್ಯಾಕ್ಟರಿಗೆ ಹೂಡಿರುವ ಬಂಡವಾಳ.

1469 - ಶ್ರೀ ಕೆ.ಎಚ್. ಹನುಮೇಗೌಡ (ಹಾಸನ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ನಗರದಲ್ಲಿನ ಕಿಂಕೋ ಫ್ಯಾಕ್ಟರಿಗೆ ಸರ್ಕಾರ ಎಷ್ಟು ಬಂಡವಾಳ ಹೂಡಿದೆ?

ಆ) ಕಳೆದ ಮೂರು ವರ್ಷಗಳಿಂದ ವರ್ಷವೊಂದಕ್ಕೆ ನಷ್ಟ ಅನುಭವಿಸಿದ ಮೊತ್ತ ಎಷ್ಟು?

ಇ) ಈ ಕಾರ್ಖಾನೆಯು ಈ ರೀತಿ ನಷ್ಟ ಅನುಭವಿಸಲು ಕಾರಣಗಳೇನು?

ಈ) ಈ ಕಾರ್ಖಾನೆಯು ಲಾಭದಾಯಕವಾಗಿ ನಡೆಯಲು ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳಲಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ರೂ. 273.19 ಲಕ್ಷ.

ಆ) ಕಳೆದ ಮೂರು ವರ್ಷಗಳಲ್ಲಿ ಹಾಸನದ ಕಿಂಕೋ ವಿಭಾಗವು ಈ ಕೆಳಕಂಡ ನಷ್ಟ ಅನುಭವಿಸಿದೆ:

1987-88	ರೂ. 54.80 ಲಕ್ಷ
1988-89	ರೂ. 12.10 ಲಕ್ಷ
1989-90	ರೂ. 53.31 ಲಕ್ಷ

ಇ) ಇಲ್ಲಿ ನಷ್ಟಕ್ಕೆ ಮುಖ್ಯ ಕಾರಣಗಳೆಂದರೆ, ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಸಾಕಷ್ಟು ಬಾಸಿಗಳನ್ನು ಪೂರೈಸದೇ ಇರುವುದು, ಪೂರ್ಣ ಪ್ರಮಾಣದ ಕೆಲಸ ಇಲ್ಲದೇ ಇರುವುದು, ಷೇರು ಬಂಡವಾಳದ ಕೊರತೆ ಹಾಗೂ ಹೆಚ್ಚಿನ ಕಾರ್ಮಿಕರ ಸಂಖ್ಯೆ.

ಈ) ಈ ಕಂಪನಿಗೆ ಸಾಕಷ್ಟು ಬಾಸಿಗಳನ್ನು ಪೂರೈಸಲು ರಾಜ್ಯ ರಸ್ತೆಸಾರಿಗೆ ನಿಗಮವನ್ನು ಕೋರಲಾಗಿದೆ. ಈ ಕಂಪನಿಯು ಸಹ ಬೇರೆ ರಾಜ್ಯದ ರಸ್ತೆಸಾರಿಗೆ ನಿಗಮಗಳಿಂದ ಬಾಸಿಗಳಿಗಾಗಿ ಪ್ರಯತ್ನಿಸುತ್ತಿದೆ. ಈಗಾಗಲೇ ದೆಹಲಿ ಸಾರಿಗೆ ನಿಗಮದಿಂದ ಕೆಲಸ ಸಿಕ್ಕಿದೆ. ಕಂಪನಿಯ ಪುನಸಜ್ಜೀಕರಣದ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಹಾಸನ ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆ ಬಗ್ಗೆ.

1468 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆಯು ಕೈಗಾರಿಕೆಗಳ ದೃಷ್ಟಿಯಿಂದ ಹಿಂದುಳಿದ ಜಿಲ್ಲೆ ಎಂದು ಸರ್ಕಾರ ಪರಿಗಣಿಸಿರುವುದೆ?

ಆ) ಹಾಗಿದ್ದಲ್ಲಿ, ಈ ಜಿಲ್ಲೆಯಲ್ಲಿ ಯಾವ ಯಾವ ಅಸೆಂಬ್ಲಿ ಕ್ಷೇತ್ರಗಳಲ್ಲಿ ಹೊಸದಾಗಿ ಕೈಗಾರಿಕೆಗಳನ್ನು ಪ್ರಾರಂಭಿಸಲಾಗಿದೆ.

ಇ) ಕೈಗಾರಿಕೋದ್ಯಮಿಗಳಿಗೆ ಈ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಯಾವ ಯಾವ ರಿಯಾಯಿತಿಗಳನ್ನು ಕೊಡಲಿದೆ (ವಿವರ ಕೊಡುವುದು)?

ಶ್ರೀ ಎಸ್. ಬಂಗಾರಪ್ಪ, (ಮುಖ್ಯಮಂತ್ರಿಗಳು) :

ಅ) ಹೌದು, ಹಾಸನ ಜಿಲ್ಲೆಯನ್ನು ಕೈಗಾರಿಕೆಯಲ್ಲಿ ಹಿಂದುಳಿದ ಜಿಲ್ಲೆಯೆಂದು ಪರಿಗಣಿಸಿ ಅರಸೀಕೆರೆ ಹಾಸನ ತಾಲ್ಲೂಕುಗಳನ್ನು ವಲಯ-2ರಲ್ಲೂ ಅರಕಲಗೂಡು, ಬೇಲೂರು ಸಕಲೇಶಪುರ, ಆಲೂರು ಹೊಳೇನರಸೀಪುರ, ಚೆನ್ನರಾಯಪಟ್ಟಣ ತಾಲ್ಲೂಕನ್ನು ವಲಯ-3ರಲ್ಲೂ ಹಾಗೂ ಹಾಸನದಲ್ಲಿ ಸ್ಥಾಪಿಸಲಿರುವ ಕೈಗಾರಿಗಾ ಬೆಳವಣಿಗಾ ಕೇಂದ್ರವನ್ನು ವಲಯ-4ರಲ್ಲಿ ಸೇರಿಸಿ ಸಹಾಯ ಸವಲತ್ತುಗಳನ್ನು ನೀಡಲಾಗುತ್ತಿದೆ.

ಆ) ಹಾಸನ ಜಿಲ್ಲೆಯಲ್ಲಿ 1990-91ನೇ ಸಾಲಿನಲ್ಲಿ ಜನವರಿ 1991ರವರೆಗೆ 292 ಸಣ್ಣ ಕೈಗಾರಿಕೆಗಳು ಸ್ಥಾಪನೆಗೊಂಡಿವೆ ಹಾಗೂ ಎರಡು ಮಧ್ಯಮ ಮತ್ತು ಭಾರಿ ಕೈಗಾರಿಕೆಗಳ ಸ್ಥಾಪನೆಗಾಗಿ ಕ್ರಮ ಕೈಗೊಳ್ಳಲಾಗಿದೆ.

ಇ) ದಿನಾಂಕ 30-9-88ರಿಂದ ಕೇಂದ್ರ ಸರ್ಕಾರವು ಯಾವುದೇ ಸಹಾಯಧನವನ್ನು ನೀಡುತ್ತಿಲ್ಲ. ರಾಜ್ಯ ಸರ್ಕಾರವು ಈ ಕೆಳಕಂಡ ಸಹಾಯ ಸೌಲಭ್ಯಗಳನ್ನು ನೀಡುತ್ತಿದೆ.